**ಒಂದನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು**

**ಸಿಸಿ ನಂ.72/2019**

ಫಿರ್ಯಾದುದಾರರುಃ ಸರ್ಕಾರದ ಪರವಾಗಿ ಹುಣಸೂರು
ಪಟ್ಟಣ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ

1. ಕಿರಣ @ ಸುಧೀ, ತಂದೆ – ಚಿಕ್ಕರಾಜನಾಯಕ
(**ವಿಭಾಜಿಸಲ್ಪಟ್ಟಿರುತ್ತಾರೆ**)

2. ಶಿವು, ತಂದೆ – ಬಾಬು ವಿಹಾರಿ
(**ವಿಭಾಜಿಸಲ್ಪಟ್ಟಿರುತ್ತಾರೆ**)

3. ವಿನೋದ್ ಕುಮಾರ್ @ ವಿನೋದ್ @
ಸೂರಿ @ ಆರ್ ಎಕ್ಸ್ ಸೂರಿ
ತಂದೆಃ ಲೇ. ಅಂದಾನಿ ಸ್ವಾಮಿ
22 ವರ್ಷ, ಕೂಲಿ ಕೆಲಸ,
ಮುತ್ತೂರು ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು,
ಮೈಸೂರು ಜಿಲ್ಲೆ.

4. ಸಂದೀಪ ಹೆಚ್.ಜಿ. @ ವಿಲನ್ @ ಮಿಣ್ಣಿ
ತಂದೆಃ ಲೇ. ಜಗದೀಶ,
18 ವರ್ಷ, ಕೂಲಿ ಕೆಲಸ
ಸರಸ್ವತಿಪುರಂ , ಹುಣಸೂರು ಟೌನ್,
ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರ ಅಡಿಯಲ್ಲಿ ಆರೋಪಿಗಳ ಹೇಳಿಕೆ**

| | |
|---|---|
| ಪ್ರಶ್ನೆ 1: | ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷ್ಯಗಳನ್ನು ನೀವು ತಿಳಿದುಕೊಂಡಿರುವಿರಾ? |
| ಉತ್ತರ: | ಎ 3<br>ಎ 4 |

| | |
|---|---|
| ಪ್ರಶ್ನೆ 2: | ಫ್ರಾಸಾ – 4 ಅಪ್ಪಣ್ಣ ರವರು ತಮ್ಮ ಸಾಕ್ಷ್ಯದಲ್ಲಿ, ಪೊಲೀಸರು ಮಹಜರ್ ಸಮಯದಲ್ಲಿ ತನ್ನನ್ನು 3 ವರ್ಷದ ಹಿಂದೆ ಹುಣಸೂರು ಪಟ್ಟಣ ಪೊಲೀಸರು ಠಾಣೆಗೆ ಕರೆದಿದ್ದು , ಆ ಸಮಯದಲ್ಲಿ 2 ರಾಡು ಮತ್ತು 1 ಆಕ್ಟೀವಾ ಹೊಂಡಾ ದ್ವಿಚಕ್ರ ವಾಹನವನ್ನು ವಶಪಡಿಸಿಕೊಂಡಿದ್ದು, 3,000/– ರಿಂದ 4,000/– ಹಣ, 2 ಮೊಬೈಲ್ ತೋರಿಸಿ ಅದು ಕಳ್ಳತನದ ವಸ್ತುಗಳು ಎಂದು ಹೇಳಿ ತನ್ನಿಂದ ಸಹಿ ಪಡೆದಿದ್ದು, ನಂತರ ನ್ಯಾಯಾಲಯದ ಮುಂದಿದ್ದ 2 ರಾಡುಗಳನ್ನು ಗುರುತಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಎ 3<br>ಎ 4 |
| ಪ್ರಶ್ನೆ 3: | ಫ್ರಾಸಾ–8 ಶಿವಪ್ಪ ನಾಯಕ ಇವರು ತಮ್ಮ ಸಾಕ್ಷ್ಯದಲ್ಲಿ ತಾನು 2016 ರಿಂದ 2019 ರ ವರೆಗೆ ಪೌರಯುಕ್ತನಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಕೃತ್ಯ ನಡೆದ ಮನೆಯ ದೃಢೀಕರಣ ಪತ್ರವನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಎ 3<br>ಎ 4 |
| ಪ್ರಶ್ನೆ 4: | ಫ್ರಾಸಾ – 9 ಮಹೇಶ್ ಜಿ.ಈ. ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿಃ 01.06.2018 ರಂದು ಚಾಸಾ 13 ರವರಿಂದ ಈ ಪ್ರಕರಣ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರೆಸಿ, ಅದೇ ದಿನ ವಿಶೇಷ ರಾತ್ರಿ ಗಸ್ತಿಗಾಗಿ ಚಾಸಾ 9 ರಿಂದ 11 ರವರನ್ನು ನೇಮಕ ಮಾಡಿದ್ದು, ತಾನು ಕೂಡ ಆ ದಿನ ರಾತ್ರಿ ವಿಶೇಷ ಗಸ್ತು ಕರ್ತವ್ಯದಲ್ಲಿ ಇದ್ದು, ದಿನಾಂಕ 02.06.2018 ರ ಮುಂಜಾನೆ ಸುಮಾರು 3 ಗಂಟೆಗೆ ಹುಣಸೂರು ಹೊಸ ಅಂಚೆ ಕಚೇರಿ ರಸ್ತೆಯಲ್ಲಿ ಮೂರು ಜನ ಆಸಾಮಿಗಳು ಒಂದು ಸ್ಕೂಟರ್ ನಲ್ಲಿ ಹೋಗುತ್ತಿದ್ದು ತಮ್ಮ ಜೀಪ್ ನ್ನು ನೋಡಿ ಓಡಿಹೋಗಲು ಪ್ರಯತ್ನಿಸಿದ್ದು, ತಕ್ಷಣ ತಾನು ಚಾಸಾ 12 ರವರಿಗೆ ಕರೆ ಮಾಡಿ ಪಿರಿಯಾಪಟ್ಟಣ ರಸ್ತೆಯ ಕಡೆಯಿಂದ ಬಂದು ಸೇತುವೆ ಹತ್ತಿರ ಸಾಲಿಯಾನ್ ರವರ ಮನೆಯ ಹತ್ತಿರ ಸದರಿ ಮೂರು ಆಸಾಮಿಗಳನ್ನು ಹಿಡಿದು ಠಾಣೆಗೆ ಕರೆ ತಂದು ಹೆಸರು ವಿಳಾಸ ಕೇಳಲಾಗಿ ಒಬ್ಬ ವ್ಯಕ್ತಿ ಕಿರಣ ಅಲಿಯಾಸ್ ಸುದಿ ಬಿನ್ ಚಿಕ್ಕರಾಜನಾಯಕ್, 19 ವರ್ಷ, ಕೂಲಿ ಕೆಲಸ, ಅಜಾದ್ ನಗರ, |

| | |
|---|---|
| | ಹುಣಸೂರು ತಾಲ್ಲೂಕು ಎಂದು ತಿಳಿಸಿದ. ಇನ್ನೊಬ್ಬ ತನ್ನ ಹೆಸರು ವಿನೋದ್ ಕುಮಾರ್ ಅಲಿಯಾಸ್ ಸೂರಿ ಅಲಿಯಾಸ್ ಆರ್ ಎಕ್ಸ್ ಸೂರಿ ಬಿನ್ ಚಿಟ್ಟಿ ಲೇಟ್ ಅಂದಾನಿ, 20 ವರ್ಷ, ಗಾರೆ ಕೆಲಸ, ಮುತ್ತೂರು ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು ಎಂದು ತಿಳಿಸಿದ. ಇನ್ನೊಬ್ಬನ ಹೆಸರು ಸಂದೀಪ ಹೆಚ್ ಜೆ ಅಲಿಯಾಸ್ ವಿಲನ್ ಅಲಿಯಾಸ್ ಮಿನ್ನಿ ಬಿನ್ ಲೇಟ್ ಜಗದೀಶ, 18 ವರ್ಷ, ಮರಗೆಲಸ, ಸರಸ್ವತಿಪುರಂ, ಹುಣಸೂರು ಟೌನ್ ಎಂದು ತಿಳಿಸಿದ್ದು, ಸದರಿ ಮೂರು ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳುವು ಮಾಡಿದ ಮಾಲುಗಳನ್ನು ಪಿರಿಯಾಪಟ್ಟಣದ ನತ್ತುಲಾಲ್, ಅರ್ಜುನ್ ಲಾಲ್ ಜ್ಯೂವೆಲರಿ ಮತ್ತು ಪಾನ್ ಬ್ರೋಕರ್ಸ್ ಅಂಗಡಿಯಲ್ಲಿ ಗಿರವಿ ಇಟ್ಟಿರುವುದಾಗಿ ತಿಳಿಸಿದ ಮೇರೆಗೆ ಅವರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಎ 3<br>ಎ 4 |
| ಪ್ರಶ್ನೆ 5: | ಸಾಕ್ಷಿ ಮುಂದುವರೆದು, ಮೇಲೆ ಹೇಳಿದ ಮೂರು ಆಸಾಮಿಗಳನ್ನು ಠಾಣೆಯಲ್ಲಿ ವಿಚಾರಣೆಗೆ ಒಳಪಡಿಸಿ ಕೆಎ-32 ಇಪಿ-2953 ನಂಬರಿನ ಕಪ್ಪು ಬಣ್ಣದ ಹೋಂಡಾ ಆಕ್ಟಿವ್ ಸ್ಕೂಟರ್, ಸ್ಕೂಟರ್ ನ ಎರಡು ಕೀಗಳು, ಎರಡು ಕಬ್ಬಿಣದ ಸರಳುಗಳನ್ನು ಮತ್ತು 1 ನೇ ಆರೋಪಿಯ ಬಳಿಯಿಂದ ಬಿಳಿ ಮತ್ತು ಗೋಲ್ಡನ್ ಬಣ್ಣದ ಒಪ್ಪೋ ಕಂಪನಿಯ ಹಳೆಯ ಮೊಬೈಲ್ ಅದರಲ್ಲಿ 7975235043, 9742838818 ನಂಬರಿನ ಸಿಮ್ ಗಳು ಇದ್ದು, 1 ನೇ ಆರೋಪಿಯ ಬಳಿಯಿಂದ ರೂ.500/- ರ ಮುಖಬೆಲೆಯ 4 ನೋಟುಗಳು ಇದ್ದ ಒಟ್ಟು ರೂ.2000/- ಗಳನ್ನು ಜಪ್ತು ಮಾಡಿಕೊಂಡಿದ್ದು, 3 ನೇ ಆರೋಪಿಯಾದ ನಿಮ್ಮ ಬಳಿಯಿಂದ ಒಂದು ಬಿಳಿ ಮತ್ತು ಗೋಲ್ಡನ್ ಕಲರ್ ನ ಒಪ್ಪೋ ಕಂಪನಿಯ ಹಳೆಯ ಮೊಬೈಲ್ ಅದರಲ್ಲಿ 9108395447 ಎಂಬ ನಂಬರಿನ ಸಿಮ್ ಇದ್ದು, ನಿಮ್ಮ ಬಳಿಯಿಂದ ರೂ.1700/- ನಗದು ಹಣವನ್ನು ಅಮಾನತ್ತು ಪಡಿಸಿಕೊಂಡಿದ್ದು, 4 ನೇ ಆರೋಪಿಯಾದ ನಿಮ್ಮ ಬಳಿಯಿಂದ ಒಂದು ಕಪ್ಪು ಬಣ್ಣದ ಸ್ಯಾಮ್‌ಸಂಗ್ ಡಿಯೋಸ್ ಕಂಪನಿಯ ಹಳೆಯ ಮೊಬೈಲ್ ಅದರಲ್ಲಿ 7349026359 ನಂಬರಿನ ಸಿಮ್ ಇದ್ದು ನಿಮ್ಮ ಬಳಿಯಿಂದ ಒಟ್ಟು ರೂ.1160/- ನ್ನು |

| | |
|---|---|
| | ಅಮಾನತ್ತು ಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಎ 3<br>ಎ 4 |
| ಪ್ರಶ್ನೆ 6: | ಸಾಕ್ಷಿ ಮುಂದುವರೆದು, ತನಿಖೆಯನ್ನು ಮುಂದುವರೆಸಿ ಸದರಿ ಆರೋಪಿತರು ಒಡವೆಗಳನ್ನು ಗಿರವಿ ಇಟ್ಟ ಅಂಗಡಿಯನ್ನು ಕರೆದುಕೊಂಡು ಹೋದರೆ ತೋರಿಸುವುದಾಗಿ ಹೇಳಿದ ಮೇರೆಗೆ ಚಾಸಾ 6 ಮತ್ತು 7 ರವರನ್ನು ಪಂಚರಾಗಿ ಠಾಣೆಗೆ ಬರಮಾಡಿಕೊಂಡು ಅವರಿಗೆ ವಿಷಯವನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡ ಮೇರೆಗೆ ಅವರು ಒಪ್ಪಿಕೊಂಡ ಮೇರೆಗೆ ಅವರೊಂದಿಗೆ, 1 ಮತ್ತು 3 ನೇ ಆರೋಪಿಯಾದ ನಿಮ್ಮ ಜೊತೆ ಇಲಾಖಾ ವಾಹನದಲ್ಲಿ ಚಿಕ್ಕುಂದ ಮಾರ್ಗವಾಗಿ ಪಿರಿಯಾಪಟ್ಟಣಕ್ಕೆ ತೆರಳಿದಾಗ ಒಂದು ಜ್ಯುವೆಲರಿ ಶಾಪ್ ಮುಂದೆ ಜೀಪ್ ನ್ನು ನಿಲ್ಲಿಸುವಂತೆ 1 ಮತ್ತು 3 ನೇ ಆರೋಪಿಯಾದ ನೀವು ಹೇಳಿದ್ದು ಆ ಪ್ರಕಾರ ವಾಹನವನ್ನು ನಿಲ್ಲಿಸಲಾಗಿ ಸದರಿ ಅಂಗಡಿಯ ಮಾಲೀಕರಾದ ಚಾಸಾ 8 ರವರಿಗೆ ಈ ವಿಷಯವನ್ನು ತಿಳಿಸಿದ್ದು, ಈ ಪ್ರಕರಣಕ್ಕೆ ಸಂಬಂಧಪಟ್ಟಂತಹ ಕಳುವು ಮಾಡಿದ ಚಿನ್ನದ ಒಡವೆಗಳಾದ 5 ಗ್ರಾಂ 0.50 ಮಿಲಿ ಗ್ರಾಂ ತೂಕದ ಬಿಳಿ ಹರಳಿನ ಚಿನ್ನದ ಉಂಗುರ, 1 ಗ್ರಾಂ 608 ಮಿಲಿ ಗ್ರಾಂ ತೂಕದ ಚಿನ್ನದ ಉಂಗುರ, 2 ಗ್ರಾಂ 730 ಮಿಲಿ ಗ್ರಾಂ ತೂಕದ ಚಿನ್ನದ ಕಿವಿಯ ರಿಂಗ್ ಗಳು ಮತ್ತು 7 ಗ್ರಾಂ 900 ಮಿಲಿ ಗ್ರಾಂ ತೂಕದ ಚಿನ್ನದ ಚೈನನ್ನು ಹಾಜರುಪಡಿಸಿದ್ದು ಅವುಗಳನ್ನು ಚಾಸಾ 6 ಮತ್ತು 7 ರವರ ಸಮಕ್ಷಮ ಮಹಜರಿನ ಮೂಲಕ ಅಮಾನತ್ತು ಪಡಿಸಿಕೊಂಡಿದ್ದು, ಸದರಿ ಮಹಜರ್ ನ್ನು ಮಧ್ಯಾಹ್ನ 1 ರಿಂದ 2 ಗಂಟೆಯವರೆಗೆ ಜರುಗಿಸಿ 1 ಮತ್ತು 3 ನೇ ಆರೋಪಿಯಾದ ನಿಮ್ಮ ಸಹಿಗಳನ್ನು ಪಡೆದುಕೊಂಡಿದ್ದು, ವಶಪಡಿಸಿಕೊಂಡ ಮಾಲು ಮತ್ತು ಆರೋಪಿಗಳೊಂದಿಗೆ ಠಾಣೆಗೆ ವಾಪಸ್ಸಾಗಿ ಸ್ವತ್ತನ್ನು ಮಾಲು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯದ ಆದೇಶಕ್ಕಾಗಿ ನಿವೇದಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಎ 3<br>ಎ 4 |

| | |
|---|---|
| ಪ್ರಶ್ನೆ 7: | ಸಾಕ್ಷಿ ಮುಂದುವರೆದು, ದಿನಾಂಕ 02.06.2018 ರಂದು ಚಾಸಾ 1 ರವರನ್ನು ಠಾಣೆಗೆ ಬರಮಾಡಿಕೊಂಡು ಪತ್ತೆಯಾದ ಮಾಲುಗಳನ್ನು ಅವರಿಗೆ ತೋರಿಸಿದ ಮೇರೆಗೆ ಅವರು ಅವುಗಳನ್ನು ಗುರುತಿಸಿದ್ದು ಆ ಬಗ್ಗೆ ಅವರ ಮುಂದುವರೆದ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ಆ ಸಮಯದಲ್ಲಿ ಚಾಸಾ 4 ಮತ್ತು 5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿದ ಬಗ್ಗೆ ಒಪ್ಪಿಕೊಂಡ ಮೇರೆಗೆ ಅದು ಘೋರ ಪ್ರಕರಣವಾಗಿದ್ದರಿಂದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 15 ರವರಿಗೆ ಹಸ್ತಾಂತರಿಸಿದ್ದು, ತಾನು ವಶಕ್ಕೆ ಪಡೆದುಕೊಂಡಂತಹ 1, 3 ಮತ್ತು 4 ನೇ ಆರೋಪಿಗಳಾದ ನಿಮ್ಮನ್ನು ಗುರುತಿಸಿದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಎ 3<br>ಎ 4 |
| ಪ್ರಶ್ನೆ 8: | ಫ್ರಾಸಾ – 10 ಸುರೇಶ ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ 24.04.2018 ರಂದು ಬೆಳಿಗ್ಗೆ 10.30 ಗಂಟೆಗೆ ತಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ 1 ರವರು ತನ್ನ ಮುಂದೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ಠಾಣೆ ಮೊಕದ್ದಮೆ ಸಂಖ್ಯೆ 252/2018 ರಲ್ಲಿ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದು, ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ 1 ರವರು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 1 ರಿಂದ 1.45 ಗಂಟೆಯವರೆಗೆ ಮಹಜರನ್ನು ಜರುಗಿಸಿದ್ದು, ಮಹಜರು ಸಮಯದಲ್ಲಿ ಒಂದು ಬೀಗವನ್ನು ಅಮಾನತ್ತು ಪಡಿಸಿಕೊಂಡಿದ್ದು ಅದನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯದ ಆದೇಶಕ್ಕಾಗಿ ನಿವೇದಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಎ 3<br>ಎ 4 |

| | |
|---|---|
| ಪ್ರಶ್ನೆ 9: | ಫ್ರಾಸಾ – 11 ಎ.ಸಿ. ಪೂವಯ್ಯ ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಅಕ್ಟೋಬರ್ 2017 ರಿಂದ ಮಾರ್ಚ್ 2021 ವರೆಗೆ ಹುಣಸೂರು ವೃತ್ತದಲ್ಲಿ ಸಿ.ಪಿ.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿಃ 04.06.2018 ರಂದು ಚಾಸಾ 14 ರವರಿಂದ ಕಡತವನ್ನು ಪಡೆದು ಪರಿಶೀಲಿಸಿದ್ದು, ದಿಃ 24.07.2018 ರಂದು ಚಾಸಾ 10 ಮತ್ತು 11 ರವರ ಹೇಳಿಕೆಗಳನ್ನು ಪಡೆದು, ನಂತರ ನಂತರ ತನಿಖೆಯು ಪೂರ್ಣಗೊಂಡಿದ್ದು, ಆರೋಪಿಗಳಾದ ನಿಮ್ಮ ವಿರುದ್ದ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ? |
| ಉತ್ತರ: | ಎ3<br>ಎ4 |
| ಪ್ರಶ್ನೆ 10: | ಫ್ರಾಸಾ–12 ಚೇತನ್ ಕುಮಾರ ಎಂ ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ 01.06.2018 ರಂದು ತನ್ನನ್ನು ಮತ್ತು ಚಾಸಾ–12 ರವರನ್ನು ವಿಶೇಷ ಕರ್ತವ್ಯಕ್ಕೆಂದು ನೇಮಿಸಿದ್ದು, ಕಲ್ಕುಣಿಕೆ, ಬೇಕರಿ ಸರ್ಕಲ್, ಹಳೆ ಸೇತುವೆ ಕಡೆ ಗಸ್ತು ಮಾಡುತ್ತಿದ್ದಾಗ ಬೆಳಗಿನಜಾವ 3.00 ಗಂಟೆ ಸಮಯದಲ್ಲಿ ಚಾಸಾ–16 ರವರ ಜೊತೆಯಲ್ಲಿ ಗಸ್ತಿನಲ್ಲಿದ್ದಾಗ ಚಾಸಾ–14, 11, ಪಿಸಿ–498 ಕಿರಣ್ ರವರು ಹಳೆ ಪೋಸ್ಟ್ ಆಫೀಸು ರಸ್ತೆಯಲ್ಲಿ ಗಸ್ತುವಿನಲ್ಲಿದ್ದಾಗ ಚಾಸಾ–12 ರವರಿಗೆ ದೂರವಾಣಿ ಕರೆ ಮಾಡಿ ಮೂವರು ವ್ಯಕ್ತಿಗಳು ಅನುಮಾನಾಸ್ಪದವಾಗಿ ಬೈಕಿನಲ್ಲಿ ಹೋಗುತ್ತಿದ್ದು ಸದರಿಯವರು ಪಿರಿಯಾಪಟ್ಟಣದ ಹಳೆ ಸೇತುವೆ ರಸ್ತೆ ಕಡೆ ಬರುತ್ತಿದ್ದಾರೆಂದು, ತನ್ನನ್ನು ಅಲ್ಲಿಗೆ ಬರಲು ತಿಳಿಸಿದ ಮೇರೆಗೆ, ಅಲ್ಲಿಗೆ ಹೋಗಿದ್ದು ರವಿಸಾಲೆ ಮನೆಯ ಅಂಚಿನ ಮನೆಯ ಬಳಿ ಸುತ್ತುವರಿದು ಮೂವರು ವ್ಯಕ್ತಿಗಳನ್ನು ಹಿಡಿದುಕೊಂಡು ವಿಚಾರಿಸಿದಾಗ ಅವರಲ್ಲಿ ಒಬ್ಬನ ಬಲಗೈ ಹೆಬ್ಬೆರಳ ಹತ್ತಿರ ರನ್ನ ಎಂಬ ಹಸಿರು ಹಚ್ಚೆ ಇದ್ದು, ಈ ಹಿಂದೆ ದಾಖಲಾದ 296/2018 ರ ಪ್ರಕರಣದಲ್ಲಿ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದ ವ್ಯಕ್ತಿ ಈತನೆ ಎಂದು ಚಾಸಾ–12 ರವರಿಗೆ ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ? |

| | |
|---|---|
| ಉತ್ತರ: | ಎ 3<br>ಎ 4 |
| ಪ್ರಶ್ನೆ 11: | ಸಾಕ್ಷಿ ಮುಂದುವರೆದು, ಸದರಿಯವರ ಬೈಕನ್ನು ಪರಿಶೀಲಿಸಲಾಗಿ ಅದು ಬಿಳಿ ಬಣ್ಣದ ಬೈಕ್ ಆಗಿದ್ದು, ಸದರಿ ಬೈಕಿನ ನಂಬರ್ ಪ್ಲೇಟ್ ನಲ್ಲಿ ನಂಬರನ್ನು ತೆಗೆದು ಬೇರೆ ನಂಬರನ್ನು ಹಾಕಿದ್ದು ಈ ಹಿಂದೆ ಮ್ಯಾಜಿಸ್ಟ್ರೇಟ್ ಮನೆಯ ಬೈಕ್ ಕಳ್ಳತನವಾಗಿದ್ದು, ಅದು ಇದೆ ಬೈಕ್ ಎಂದು ಆರೋಪಿಗಳಾದ ನೀವುಗಳು ಒಪ್ಪಿಕೊಂಡಿದ್ದು, ಸದರಿ ಮೂವರು ಆರೋಪಿಗಳನ್ನು ದಸ್ತಗಿರಿ ಮಾಡಿ ಬೆಳಗಿನಜಾವ 3.30 ಕ್ಕೆ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆ ಮಾಡಲಾಗಿ 1 ನೇ ಆರೋಪಿ ಕಿರಣ, 2 ನೇ ಆರೋಪಿ ಸಂದೀಪ, 3 ನೇ ಆರೋಪಿ ವಿನೋದ ಎಂದು ತಿಳಿಸಿದ್ದು, ಈ ಹಿಂದೆ ಸರ್ಕಾರಿ ನೌಕರ ಕಟ್ಟಡದಲ್ಲಿ ಒಬ್ಬ ಭಿಕ್ಷುಕನನ್ನು ಹಣದ ವಿಚಾರವಾಗಿ ಗಲಾಟೆ ಮಾಡಿ ಆ ವ್ಯಕ್ತಿಯನ್ನು ಕೊಲೆ ಮಾಡಿರುವುದಾಗಿ ಮೂವರು ತಿಳಿಸಿದ್ದು, ಸದರಿ ಆರೋಪಿಗಳಿಂದ ಚಿನ್ನ, ವಡವೆ, 2 ಬೈಕು, 1 ಲ್ಯಾಪ್ ಟಾಪ್ ಗಳನ್ನು ಹಾಗೂ ಕಬ್ಬಿಣದ ರಾಡನ್ನು ವಶಕ್ಕೆ ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ? |
| ಉತ್ತರ: | ಎ 3<br>ಎ 4 |
| ಪ್ರಶ್ನೆ 12: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಎ 3<br>ಎ 4 |

| | |
|---|---|
| ಪ್ರಶ್ನೆ 13: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಎ 3<br>ಎ 4 |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗಳಿಗೆ ಓದಿ ಹೇಳಿ, ಅವರುಗಳು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 18.06.2026.

(ಭಾಗ್ಯಮ್ಮ)
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

**ಆರೋಪಿತರ ಸಹಿಃ**